**ಸಾಕ್ಷಿಯನ್ನು ದಿಃ *01/03/2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಮುಂದುವರೆದ ಪಾಟೀ ಸವಾಲು ಃ ವಾದಿ ಪರ ವಕೀಲರಿಂದ.***

ಸಿಟಿಎಸ್ ನಂ.58 ಎ/1 ಬಿ/ಬಿ ಆಸ್ತಿಯನ್ನು ನನ್ನ ತಂದೆ ಮತ್ತು ಅರವಿಂದ ರೇಗೆ ಇಬ್ಬರೂ ಖರೀದಿ ಮಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ತಂದೆ ಖರೀದಿಸಿದ್ದು ಇರುತ್ತದೆ ಆದರೆ ಸಾಲ ತೆಗೆಯುವ ಕ್ರಮದಲ್ಲಿ ಅವರ ಹೆಸರನ್ನು ಜೋಡಿಸಿಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಖರೀದಿ ಪತ್ರದಲ್ಲಿ ಸದರಿ ಅಂಶವನ್ನು ಬರೆದಿದ್ದಾರೆ ಇಲ್ಲವೂ ನನಗೆ ಗೊತ್ತಿಲ್ಲ. ಸದರಿ ಹೇಳಿಕೆಯನ್ನು ನನ್ನ ತಂದೆಯವರೇ ಖುದ್ದಾಗಿ ಹೇಳಿರುತ್ತಾರೆ ಮತ್ತು ಅರವಿಂದ ರೇಗೆ ಇವರು ಸಹ ಇನ್ನೊಂದು ಪ್ರಕರಣದಲ್ಲಿ ಸದರಿ ವಿಷಯ ಒಪ್ಪಿಕೊಂಡಿರುತ್ತಾರೆ. ಈ ರೀತಿ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಬರಿಬ್ಬರನ್ನು ಹೊರತುಪಡಿಸಿ ಇನ್ನೂ 7-8 ಜನ ಅಣ್ಣತಮ್ಮಂದಿರು ಒಂದೇ ಕುಟುಂಬದಲ್ಲಿ ಇರುತ್ತಿದ್ದರು ಎಂದರೆ ನಿಜ. ಸದರಿಯವರನ್ನು ಸದರಿ ಖರೀದಿಪತ್ರಕ್ಕೆ ಯಾಕೆ ಸೇರಿಸಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅರವಿಂದ ರೇಗೆ ಇವರು ಖಾಸಗಿ ನೌಕರರು ಇರುವ ಕಾರಣ ತೆರಿಗೆ ಸೌಲಭ್ಯವನ್ನು ಪಡೆಯಲು ಅವರ ಹೆಸರನ್ನು ಮಾತ್ರ ಸೇರಿಸಿಕೊಂಡರು ಆದರೆ ಇನ್ನುಳಿದ ಕಾರಣ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಕೆನರಾ ಬ್ಯಾಂಕನಿಂದ ಸಾಲ ಪಡೆಯಲು ಅನುಕೂಲವಾಗುತ್ತದೆ ಎಂದು ಅರವಿಂದ ರೇಗೆ ಇವರ ಹೆಸರು ಕೂಡಿಸಿಕೊಂಡಿರುತ್ತಾರೆ. ಬೇರೆಯವರ ಹೆಸರುಗಳನ್ನು ಯಾವ ಆಧಾರದ ಮೇಲೆ ಮತ್ತು ಯಾವ ಕಾರಣಕ್ಕೆ ಬಿಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಸದರಿ ಖರೀದಿಗೆ ಎರಡು ಲಕ್ಷ ರೂಪಾಯಿಗಳ ಮುಂಗಡ ಹಣ ಕೊಟ್ಟಿದ್ದಾರೆ. ಈ ರೀತಿ ಮುಂಗಡ ಹಣ ಕೊಟ್ಟಿರುವ ಕುರಿತು ಯಾವುದೇ ದಾಖಲಾತಿ ನನಗೆ ಸಿಕ್ಕಿರುವುದಿಲ್ಲ. ಅರವಿಂದ ರೇಗೆ ಇವರದು ಯಾವುದೇ ರೀತಿ ಹಣ ಇದಕ್ಕೆ ಸಂದಾಯಿಸಿಕೊಂಡಿದ್ದು ಇರುವುದಿಲ್ಲ, ಆದರೂ ಸಹ ಅವರ ಹೆಸರನ್ನು ಸೇರಿಸಿಕೊಂಡಿರುತ್ತಾರೆ. ಹತ್ತು ಲಕ್ಷ ರೂಪಾಯಿಗಳ ಕೆನರಾ ಬ್ಯಾಂಕ ಸಾಲವು ಅಂದಾಜು 2003-04 ರಲ್ಲಿ ಪಡೆದುಕೊಂಡಿರಬಹುದು. ಸದರಿ ಸಾಲವು ನನ್ನ ತಂದೆ ಮತ್ತು ಅರವಿಂದ ರೇಗೆ ಇವರ ಹೆಸರಿನಲ್ಲಿರುತ್ತದೆ. ಅರವಿಂದ ರೇಗೆ ಇವರ ಹೆಸರು ತೆರಿಗೆ ಸೌಲಭ್ಯ ಸಲುವಾಗಿ ನಾಮ ಮಾತ್ರವಾಗಿ ಜೋಡಿಸಿಕೊಂಡಿರುತ್ತಾರೆ. ಈ ರೀತಿ ಇರುವಾಗ ಸದರಿ ಆಸ್ತಿಯು ಜಂಟಿ ಕುಟುಂಬದ ಉತ್ಪನದಿಂದ ಖರೀದಿ ಮಾಡಿರುವ ಆಸ್ತಿ ಇರುತ್ತದೆ ಎಂದು ಸೂಚಿಸುವ ನಿಮ್ಮ ಸಲಹೆ

ಸರಿಯಲ್ಲ. ಸದರಿ ಸಿಟಿಎಸ್ ನಂಬರನ ಮನೆಯಲ್ಲಿ ನನ್ನ ದೊಡ್ಡಪ್ಪನ ಮಕ್ಕಳಾದ ಸಂಜಯ ಮತ್ತು ಅಜೇಯ ರೇಗೆ ವಾಸವಿರುತ್ತಾರೆ.

ಸದರಿ ಆಸ್ತಿಗೆ ಸಂಬಂಧಿತ ಪೋಟೊವನ್ನು ಸಾಕ್ಷಿದಾರರಾಗಿ ತೋರಿಸಲಾಗಿ ಎಕ್ಸೈಡ ಬ್ಯಾಟರಿ ಅಂಗಡಿ ಇರುತ್ತದೆ ಎಂದರೆ ಸಾಕ್ಷಿದಾರರು ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ***ನಿ.ಪಿ.14*** ಎಂದು ಗುರುತಿಸಲಾಯಿತು. ಸದರಿ ಅಂಗಡಿಯನ್ನು ಸಮೀರ ಗರಗ ಎನ್ನುವವರು ನಡೆಸುತ್ತಾರೆ ಎಂದರೆ ಸಾಕ್ಷಿದಾರರು ನನ್ನ ಅಣ್ಣ ಸಂಜಯ ರೇಗೆ ಮತ್ತು ಸದರಿ ಸಮೀರ ಗರಗ ಇಬ್ಬರೂ ಕೂಡಿ ಪಾಲುದಾರಿಗೆ ಮೇರೆಗೆ ನಡೆಸುತ್ತಾರೆ ಎಂದು ಹೇಳುತ್ತಾರೆ. ಸದರಿ ಅಂಗಡಿಯನ್ನು ಈಗ 4-5 ವರ್ಷಗಳ ಹಿಂದೆ ಪ್ರಾರಂಭ ಮಾಡಿದ್ದೇವೆ. ದೀಪಕ ರೇಗೆರವರ ಹೇಳಿಕೆ ಪ್ರಕಾರ ಸದರಿ ಅಂಗಡಿಯನ್ನು ಪ್ರೀತಂ ರೇಗೆ ಎನ್ನುವವರು 15 ಸಾವಿರ ರೂಪಾಯಿ ಬಾಡಿಗೆ ಮತ್ತು ಹತ್ತು ಲಕ್ಷ ರೂಪಾಯಿ ಠೇವಣಿಗೆ ಸದರಿ ಸಮೀರ ಗರಗ ಇವರಿಗೆ ಬಾಡಿಗೆಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಇವತ್ತಿಗೂ ಸಹ ಸದರಿ ಪ್ರೀತಂ ರೇಗೆ ಸಮೀರ ಇವರಿಂದ ಬಾಡಿಗೆ ಪಡೆದುಕೊಳ್ಳುತ್ತಾರೆ ಎಂದರೆ ಸರಿಯಲ್ಲ. ಈ ಆಸ್ತಿಗೆ ಸಂಬಂಧಪಟ್ಟಿರುವಂತೆ ನಾನು ಹೇಳಿರುವ ನುಡಿ ಸಾಕ್ಷ್ಯವನ್ನು ನನ್ನ ಪ್ರತಿವಾದ ಪತ್ರದಲ್ಲಾಗಲಿ ಅಥವಾ ಸಾಕ್ಷಿ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ 15 ಸಾವಿರ ರೂಪಾಯಿ ಬಾಡಿಗೆಯನ್ನು ಒಟ್ಟು ಕುಟುಂಬಕ್ಕೆ ಉತ್ಪನಕ್ಕೆ ಜೋಡಿಸದೆ ನಾವೇ ಸ್ವಂತ ಉಪಯೋಗ ಮಾಡಿಕೊಳ್ಳುತ್ತಿದ್ದೇವೆ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ, ಸಾಕ್ಷಿದಾರರು ಮುಂದುವರೆದು ಬಾಡಿಗೆಗೆ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ಈ ರೀತಿ ಅಂಗತಿ ಕುರಿತು ಪಾಲುದಾರಿಕೆ ಕರಾರನ್ನು ಅಥವಾ ಸಂಬಂಧಿತ ಲೆಕ್ಕಪತ್ರಗಳನ್ನು ನಾನು ಹಾಜರುಪಡಿಸಿಲ್ಲ. ಹೀಗೆ ಹಾಜರುಪಡಿಸಲು ನಾನು ಅವರನ್ನು ಕೇಳಿ ನೋಡಬೇಕಾಗುತ್ತದೆ. ಆದ್ದರಿಂದ ಪಾಲುದಾರಿಕೆಯಾಗಿ ಯಾವುದೇ ಇರದೇಯಿದ್ದರೂ ಸಹ ಸದರಿ ಬಾಡಿಗೆಯನ್ನು ನಾವೇ ಬಳಿಸಬೇಕು ಎನ್ನುವ ಸಾಧನೆಗೆ ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಯಾವುದೇ ಸಾಲ ಮಾಡಿ ಖರೀದಿ ಮಾಡಿರುವುದಿಲ್ಲ, ಅದನ್ನು ಒಟ್ಟು ಕುಟುಂಬದ ಉತ್ಪನದಿಂದ ಖರೀದಿ ಮಾಡಿರುತ್ತಾರೆ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ಸದರಿ ಅಂಗಡಿ ಮೇಲೆ ಸಮೀರ ಗರಗ ಇವರದು ಮಾತ್ರ ಮೊಬೈಲ ನಂಬರ ಇರುತ್ತದೆ, ನಾನು ಹೇಳುವಂತ ಪಾಲುದಾರಿಕೆ ಭಾಗಸ್ವಾಮಿಯಾದ

ನನ್ನ ಅಣ್ಣನ ಮೊಬೈಲ ನಂಬರ ಇರುವುದಿಲ್ಲ ಎಂದರೆ ಅದರಲ್ಲಿರುವ ನಂಬರ ಯಾರದ್ದು ಇದೆ ಎಂದು ಸರಿಯಾಗಿ ಕಾಣುತ್ತಿಲ್ಲ ಎಂದು ಉತ್ತರಿಸುತ್ತಾರೆ.

ಸಂಗಮ ಸರ್ಕಲ ಧಾರವಾದಲ್ಲಿರುವ ವಾಣಿಜ್ಯ ಕಟ್ಟಡದ ಸಿಟಿಎಸ್ ನಂ.191/ಬಿ ಇದರ ಪೋಟೊ ತೋರಿಸಲಾಗಿ, ಸದರಿ ಪೋಟೊವನ್ನು ಸಾಕ್ಷಿದಾರರು ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ***ನಿ.ಪಿ.15*** ಎಂದು ಗುರುತಿಸಲಾಯಿತು. ಸದರಿ ಕಟ್ಟಡ ನೆಲಮಹಡಿ ಮತ್ತು ಮೊದಲ ಮಹಡಿಯ ಕಟ್ಟಡ ಎಂದರೆ ನಿಜ. ಸದರಿ ಪೋಟೊದಲ್ಲಿ ಕಾಣಿಸುವ ಅಂಗಡಿ ಅಮೀತ ಬಡ್ಚಿಮನಿ ಫೈನಾನ್ಸ ಇದ್ದು ಅದು ಲೇವಾದೇವಿ ವ್ಯವಹಾರ ಮಾಡುವ ಅಂಗಡಿ ಇರುತ್ತದೆ ಎಂದರೆ ನಿಜ. ಸದರಿ ಅಂಗಡಿ ಬಾಡಿಗೆಗೆ ಕೊಟ್ಟಿದ್ದು ಇರುತ್ತದೆ ಎಂದು ಉತ್ತರಿಸುತ್ತಾರೆ. ಬಾಡಿಗೆದಾರರ ಹೆಸರು ನನಗೆ ಹೇಳಲು ಬರುವುದಿಲ್ಲ. ಅಂಗಡಿಯ ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ. ಸದರಿ ಅಂಗಡಿಯನ್ನು ನಾವೇ ಬಾಡಿಗೆದಾರರಿಗೆ ಕೊಟ್ಟಿರುತ್ತೇವೆ. ಈ ರೀತಿ ಬಾಡಿಗೆಗೆ ಕೊಟ್ಟು ಇನ್ನೂ ಒಂದು ವರ್ಷ ಕಳೆದಿಲ್ಲ. ಸದರಿಯವರು ಪ್ರತಿ ತಿಂಗಳು ಬಾಡಿಗೆ ಕೊಡುತ್ತಾರೆ ಮತ್ತು ನಾವು ಸಂದಾಯಿಸುತ್ತೇವೆ. ಸದರಿ ಅಂಗಡಿ ಬಾಡಿಗೆ ಐದು ಸಾವಿರ ರೂಪಾಯಿ ಇದ್ದು ಅದನ್ನು ನನ್ನ ತಾಯಿ ನಿರ್ಮಲಾ ರೇಗೆ ಇವರು ಪಡೆದುಕೊಳ್ಳುತ್ತಾರೆ. ಈ ರೀತಿ ಬಾಡಿಗೆಯ ಬಗ್ಗೆ ನ್ಯಾಯಾಲಯಕ್ಕೆ ತಿಳಿಸಿರುತ್ತೇವೆ. ಈ ರೀತಿ ಲಿಖಿತ ಮಾಹಿತಯೊಂದಿಗೆ ಯಾವಾಗ ತಿಳಿಸಿರುತ್ತೇವೆ ಎಂದು ನನಗೆ ಖಚಿತವಾಗಿ ಹೇಳಲು ಬರುವುದಿಲ್ಲ. ಬಾಡಿಗೆದಾರರ ಜೊತೆಗೆ ನನ್ನ ತಾಯಿಯ ಹೆಸರಿನಲ್ಲಿ ಕರಾರು ಮಾಡಿಕೊಂಡಿರುತ್ತೇವೆ. ಅದಕ್ಕೆ ಠೇವಣಿ ಎಂದು 50 ಸಾವಿರ ರೂಪಾಯಿ ಪಡೆದಿರುತ್ತೇವೆ. ಇದರ ಕುರಿತು ಸಹ ಲಿಖಿತ ಅಥವಾ ಮೌಖಿಕ ಮಾಹಿತಿಯನ್ನು ನ್ಯಾಯಾಲಯಕ್ಕೆ ತಿಳಿಸಿರುತ್ತೇವೆ ಇಲ್ಲವೂ ನನಗೆ ಗೊತ್ತಿಲ್ಲ. ಈ ರೀತಿ ಬಾಡಿಗೆ ವಿಚಾರ ಪ್ರಸ್ತುತ ದಾವೆ ಚಾಲ್ತಿಯಲ್ಲಿದ್ದಾಗ ಆಗಿತ್ತು ಎಂದರೆ ನಿಜ. ಆದ್ದರಿಂದ ಈ ಮಧ್ಯ ಕಾಲದಲ್ಲಿ ಆಗಿರುವ ವ್ಯವಹಾರಗಳ ಬಗ್ಗೆ ನ್ಯಾಯಾಲಯಕ್ಕೆ ತಿಳಿಸಿರುವುದಿಲ್ಲ ಮತ್ತು ಪರವಾನಿಗೆ ಪಡೆದುಕೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಬಾಡಿಗೆ ಮತ್ತು ಠೇವಣಿಯೂ ನ್ಯಾಯಾಲಯದ ನಿರ್ದೇಶನದ ಮೇರೆಗೆ ನಡೆಯಬೇಕು ಎನ್ನುವ ಷರತ್ತಿನ ಮೇರೆಗೆ ನಡೆಯಬೇಕು ಎಂದರೆ ನನಗೆ ಅಷ್ಟೊಂದು ಗೊತ್ತಿಲ್ಲ.

ಸಿಬಿಟಿ ಪಕ್ಷದಲ್ಲಿರುವ ಒಂದು ಹೋಟೇಲ ಬಾಡಿಗೆ ಕೊಡುವಾಗ ನ್ಯಾಯಾಲಯದ ಪರವಾನಿಗೆ ಪಡೆದು ಕೊಟ್ಟಿರುತ್ತೇವೆ ಎಂದರೆ ನಿಜ. ಈ ರೀತಿ ಇರುವಾಗ ಸದರಿ ಅಮೀತ ಬಡ್ಡಿಮನಿ ಫೈನಾನ್ಸ ಇದನ್ನು ಬಾಡಿಗೆ ಕೊಡುವಾಗ ಯಾವುದೇ ಪರವಾನಿಗೆ ಇಲ್ಲದೇ ಬಾಡಿಗೆ ಕೊಟ್ಟು ಬಾಡಿಗೆ ಹಣ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ವಸೂಲಿ ಮಾಡುತ್ತಿದ್ದೇವೆ ಎಂದರೆ ನ್ಯಾಯಾಲಯದ ಆದೇಶ ಏನೂ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಅಮೀತ ಬಡ್ಡಿಮನಿ ಫೈನಾನ್ಸ ತಿಂಗಳಿಗೆ 20 ಸಾವಿರ ರೂಪಾಯಿ ಬಾಡಿಗೆ ಮತ್ತು 2 ಲಕ್ಷ ಠೇವಣಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ.

ಇದರ ಜೊತೆಗೆ ನ್ಯಾಯಾಲಯದ ಆದೇಶದ ಪ್ರಕಾರ ಸಹ ನಾವು ಬಾಡಿಗೆಯನ್ನು ಸಂದಾಯ ಮಾಡಿ 2/11 ಅಂಶ ನ್ಯಾಯಾಲಯಕ್ಕೆ ತುಂಬಬೇಕು ಎನ್ನುವ ಷರತ್ತು ಸಹ ಉಲ್ಲಂಘನೆ ಮಾಡಿದಕ್ಕೆ ನಮ್ಮ ವಿರುದ್ದ ನ್ಯಾಯ ನಿಂದನೆ ಮೂಕದ್ದಮೆ {Contempt of Court} ಸಹ ಹೂಡಲಾಗಿದೆ ಎಂದರೆ ಸರಿಯಲ್ಲ. ಈ ರೀತಿ ಇರುವಾಗ ನಾವು ಬಾಡಿಗೆ ಸಂದಾಯ ಹಣ ಮಾಡುವುದು ಬೇರೆ ಮತ್ತು ನ್ಯಾಯಾಲಯಕ್ಕೆ ತೋರಿಸುವುದು ಬೇರೆ ಎಂದರೆ ಸರಿಯಲ್ಲ. ಆದ್ದರಿಂದ ಈ ರೀತಿ ಸಂದಾಯ ವ್ಯವಹಾರಗಳು ಮೋಸ ಪೂರಿತವಾಗಿವೆ ಮತ್ತು ವಾದಿಯರಿಗೆ ನಷ್ಟವನ್ನು ಉಂಟು ಮಾಡುತ್ತಿದೆ ಎಂದರೆ ಸರಿಯಲ್ಲ. ಈ ರೀತಿ ನನ್ನ ತಂದೆ ಜೀವಂತ ಕಾಲದಿಂದಲೂ ಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಸರಿಯಲ್ಲ. ಈ ರೀತಿ ಮೊದಲಿನಿಂದಲೂ ಮಾಡುತ್ತಿರುವ ಕಾರಣ ವಾದಿಯರಿಗೆ ಈ ದಾವೆ ಮಾಡುವ ವ್ಯಾಜ್ಯಂಶ ಉಂಟಾಯಿತು ಎಂದರೆ ಸರಿಯಲ್ಲ.

ಸಂಗಮ ಸರ್ಕಲ ಧಾರವಾದಲ್ಲಿರುವ ವಾಣಿಜ್ಯ ಕಟ್ಟಡದ ಸಿಟಿಎಸ್ ನಂ.191/ಬ ಇದರ ಪಕ್ಕದಲ್ಲಿರುವ ಸಿಟಿಎಸ್ ನಂ.216ರ ಖುಲ್ಲಾ ಜಾಗೆಯ ಇದರ ಫೋಟೊ ತೋರಿಸಲಾಗಿ, ಸದರಿ ಫೋಟೊವನ್ನು ಸಾಕ್ಷಿದಾರರು ನೋಡಿ ಖುಲ್ಲಾ ಜಾಗೆ ಕಾಣುತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಫೋಟೊದಲ್ಲಿ ಚಿಲ್ಲಿ ಚೌ ಎನ್ನುವ ಅಂಗಡಿ ಕಾಣುತ್ತಿದೆ ಎಂದರೆ ನಿಜ. ಸದರಿ ಅಂಗಡಿಯನ್ನು ನನ್ನ ತಮ್ಮ ರೀತೇಶ ರೇಗೆ ನಡೆಸುತ್ತಾರೆ. ಆದ್ದರಿಂದ ಸದರಿ ಫೋಟೊವನ್ನು ***ನಿ.ಪಿ.16*** ಎಂದು ಗುರುತಿಸಲಾಯಿತು. ಸದರಿ ಕಟ್ಟಡ ನಮ್ಮ ಜಾಗೆಯಲ್ಲಿ ಕಟ್ಟಿರುವ ಕಟ್ಟಡ ಎಂದರೆ ನಿಜ. ಸದರಿ ಜಾಗೆ ನಮಗೆ ಹೇಗೆ ಬಂತು ಎಂದರೆ ಸಾಕ್ಷಿದಾರರು ಮಾಧವರಾವ ರೇಗೆ ಇವರ ಹಣದಲ್ಲಿ ಶಂಕರರಾವ ರೇಗೆ ಇವರ ಮಗನಾದ

ವಾಸುದೇವ ರೇಗೆ ಇವರ ಹೆಸರಿನಲ್ಲಿ ಖರೀದಿ ಮಾಡಿದ ಆಸ್ತಿ ಎಂದು ಹೇಳುತ್ತಾರೆ. ಯಾರಿಂದ ಖರೀದಿ ಮಾಡಿದ್ದೇವೆ ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ಅಂಗಡಿಯಿರುವ ಜಾಗೆ ಸಾರ್ವಜನಿಕ ರಸ್ತೆಯ ನಾಲಾ ಪಕ್ಕದಲ್ಲಿರುವ ಜಾಗೆ ಎಂದರೆ ನಿಜ. ಸದರಿ ಕಟ್ಟಡವನ್ನು ಕಟ್ಟಡ ಪರವಾನಿಗೆ ಪಡೆದುಕೊಂಡು ಕಟ್ಟಿದ್ದಾರೆ ಇಲ್ಲವೂ ನನಗೆ ಗೊತ್ತಿಲ್ಲ. ಸದರಿ ಕಟ್ಟಡ ಯಾವುದೇ ವ್ಯಾಜ್ಯಗಳಿಗೆ ಒಳಪಟ್ಟಿದೆ ಇಲ್ಲವೂ ನನಗೆ ಗೊತ್ತಿಲ್ಲ. ಸದರಿ ಕಟ್ಟಡ ಮೃತ ವಾಸುದೇವ ರೇಗೆ ಇವರ ಹೆಸರಿನಲ್ಲಿರುತ್ತದೆ. ಸದ್ಯಕ್ಕೆ ಯಾವ ಹೆಸರಿನಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಕಟ್ಟಡದ ಮೇಲೆ ಹುಬ್ಬಳ್ಳಿ ಅರ್ಬನ ಕೋ ಆಫ್ ಬ್ಯಾಂಕನವರು ನನ್ನ ತಂದೆಯ ಹೆಸರಿನಲ್ಲಿ ಸಾಲವನ್ನು ಮಂಜೂರು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಸಾಲ ತೀರಿಸಲಾರದ ಸಂಬಂಧ ಸದರಿ ಆಸ್ತಿಯನ್ನು ಹರಾಜಿಗೆ ಹಾಕಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಹರಾಜಿನಲ್ಲಿ ಸದರಿ ಆಸ್ತಿಯನ್ನು ಉಳಿಸಬೇಕು ಎಂದು ದೀಪಕ ರೇಗೆ ಇವರ ತಂದೆ ವಸಂತ ರೇಗೆ ಒಬ್ಬ ಪ್ರಕಾಶ ಗೋಡಬೋಲೆ ಇವರಿಂದ ಹಣ ಪಡೆದು ಸದರಿ ಸಾಲವನ್ನು ಹೊಂದಾಣಿಕೆ ಮಾಡಿ ಆಸ್ತಿ ಉಳಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಕ್ರಮವಾಗಿ ಖರೀದಿ ಕರಾರುಪತ್ರವನ್ನು ಪ್ರಕಾಶ ಗೋಡಬೋಲೆ ಇವರೇ ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕಾಶ ಗೋಡಬೋಲೆ ತೀರಿಕೊಂಡಿರುತ್ತಾರೆ ಎಂದರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಈ ರೀತಿ ಕರಾರಿನ ಉಭಯಪಕ್ಷಗಾರರು ತೀರಿಹೋದರು ಸಹ ಸದರಿ ಕರಾರು ಅನುಷ್ಠಾನಗೊಳ್ಳದೆ ಇನ್ನೂ ಹಾಗೇ ಉಳಿದಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಗೋಡಬೋಲೆ ಇವರ ವಾರಸುದಾರರು ಕಾರಾರಿನ ಅನುಷ್ಠಾನಕ್ಕೆ ಕೇಳಿದರೂ ಸಹ ನಾವು ಮಾಡಿಕೊಡುತ್ತಿಲ್ಲ ಎಂದರೆ ನಮ್ಮ ಹತ್ತಿರ ಯಾರು ಸಹ ಬಂದಿಲ್ಲ ಎಂದು ಉತ್ತರಿಸುತ್ತಾರೆ. ಈ ಆಸ್ತಿಯ ಕುರಿತು ಅಸಲು ದಾವೆ ನಂ.346/1993 ರನ್ನು ಹೆಚಡಿಎಂಸಿ ವಿರುದ್ದ ಶಾಶ್ವತ ತಡೆಯಾಜ್ಞೆ ಮಾಗಣೆ ಕೇಳಿ ಹೂಡಲಾಗಿತ್ತು ಮತ್ತು ಸದರಿ ದಾವೆ ಹೆಚಡಿಎಂಸಿ ವಿರುದ್ದ ಡಿಕ್ರಿ ಸಹ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಿಃ05-12-1967 ರಂದು ಸದರಿ ಆಸ್ತಿ ವಾಸುದೇವ ರೇಗೆ ಇವರಿಗೆ ಮಂಜೂರಾತಿಯಾಗಿರುವ ಕುರಿತು ಹೆಚಡಿಎಂಸಿರವರು ಜ್ಞಾಪನ ಪತ್ರ ನೀಡಿದ್ದು, ಸದರಿ ಪತ್ರವನ್ನು ಸಾಕ್ಷಿದಾರರು ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ***ನಿ.ಪಿ.17*** ಎಂದು ಗುರುತಿಸಲಾಯಿತು. ಅದೇ ಕ್ರಮದಲ್ಲಿ ಸದರಿ ಆಸ್ತಿಯನ್ನು ವಾಸುದೇವ ರೇಗೆ ಇವರು ಖರೀದಿ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ವಾಸುದೇವ ರೇಗೆ ಇವರ ಹೆಸರಿನಲ್ಲಿ ಖರೀದಿ ಇದ್ದರೂ ಸಹ ಸದರಿ ಆಸ್ತಿಯೂ ಈ

ದಾವೆಯಲ್ಲಿ ಒಟ್ಟು ಕುಟುಂಬದ ಆಸ್ತಿ ಎಂದು ಕಾಣಿಸಿದ್ದು ಇರುತ್ತದೆ ಎಂದರೆ ಸದರಿ ಆಸ್ತಿ ಮಾಧವರಾವ ರೇಗೆ ಇವರ ಒಟ್ಟು ಕುಟುಂಬದ ಆಸ್ತಿ ಎಂದು ಉತ್ತರಿಸುತ್ತಾರೆ. ಈ ರೀತಿ ಮಾಧವರಾವ ರೇಗೆ ಇವರ ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ಅಥವಾ ಸದರಿ ಆಸ್ತಿ ಪಡೆಯಲು ಅವರ ಹಸ್ತಕ್ಷೇಪವಿದೆ ತೋರಿಸಲು ಯಾವುದೇ ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರ ಮನವಿಯ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಪಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.